**ನಗರಸಭಾ ಕಾರ್ಯಾಲಯ, ಮಂಡ್ಯ.**

**ಸಂಖ್ಯೆ: ನಸಮಂ/ಮಾನಿಮ/ಸಿಆರ್/1/2006-07.** **ದಿನಾಂಕ:23-8-2006.**

**-: ಸಾರ್ವಜನಿಕ ಪ್ರಕಟಣೆ :-**

ಮಂಡ್ಯ ನಗರದ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ದಿನಾಂಕ:27-8-2006ರಂದು ಆಚರಿಸುವ ಗಣೇಶ ಚತುರ್ಥಿಯ ಪ್ರಯುಕ್ತ ಗಣೇಶನ ವಿಗ್ರಹವನ್ನು ಪ್ರತಿಷ್ಠಾಪನೆ ಮಾಡಿದ ನಂತರ ವಿಸರ್ಜಿಸುವಾಗ ನಗರಸಭೆ ವತಿಯಿಂದ ನಿಗಧಿಪಡಿಸಿರುವ ಸ್ಥಳವಾದ ಚೀರನಹಳ್ಳಿ ಹೆಬ್ಬಾಳದ ಹತ್ತಿರವಿರುವ ಕೆರೆ ಮತ್ತು ಹೊಸೂರು ಹೆಬ್ಬಾಳದ ಕೆರೆಯಲ್ಲಿ ವಿಸರ್ಜಿಸಬೇಕಾಗಿ ಹಾಗೂ ಸಣ್ಣ ವಿಗ್ರಹಗಳನ್ನು ಮನೆಯಲ್ಲೇ ಬಕೆಟ್‌ಗಳಲ್ಲಿ ವಿಸರ್ಜಿಸಿ ಆ ನೀರನ್ನು ಇಡಮರಗಳಿಗೆ ಉಪಯೋಗಿಸಬೇಕಾಗಿ ಹಾಗೂ ಗಣೇಶನನ್ನು ವಿಸರ್ಜಿಸುವಾಗ ಪೂಜಾ ಸಾಮಾಗ್ರಿಗಳನ್ನು ನಿರ್ದಿಷ್ಟ ಸ್ಥಳದಲ್ಲಿ ಇಡಲಾಗಿರುವ ತೊಟ್ಟಿಗಳಲ್ಲಿ ಹಾಕಬೇಕಾಗಿ ಮತ್ತು ಅದನ್ನು ನಗರಸಭೆ ವಾಹನದಿಂದ ನಿಗಧಿತ ಸ್ಥಳಕ್ಕೆ ರವಾನಿಸಲಾಗುವುದು. ಈ ರೀತಿಯ ವೈಜ್ಞಾನಿಕ ರೀತಿಯ ಜವಾಬ್ಧಾರಿಯುತ ಕ್ರಮ ಕೈಗೊಳ್ಳುವುದರಿಂದ ನಮ್ಮ ನಗರದ ಜಲ, ಪರಿಸರವನ್ನು ಸಂರಕ್ಷಿಸಲು ನಮ್ಮೊಡನೆ ಕೈಜೋಡಿಸಿದಂತಾಗುವುದು. ಹಾಗೂ ಗಣೇಶ ಮೂರ್ತಿಗಳನ್ನು ತಯಾರಿಸುವ ಹಂತದಲ್ಲಿ ಜೇಡಿ ಮಣ್ಣಿನಿಂದ ತಯಾರಿಸಬೇಕಾಗಿ ಹಾಗೂ ಸುಟ್ಟ ಜೇಡಿ ಮಣ್ಣಿನಿಂದ ತಯಾರಿಸುವ ಗಣೇಶ ಮೂರ್ತಿಗಳಿಗೆ ಪ್ರೋತ್ಸಾಹಿಸಬಾರದು. ಬಣ್ಣ ಬಳಿದಿರುವ ಮೂರ್ತಿಗಳನ್ನು ಕಡ್ಡಾಯವಾಗಿ ಕಡೆಗಣಿಸಬೇಕು. ನೀರಿನಲ್ಲಿ ಕರಗದಿರುವಂತಹ ರಸಾಯನಿಕ ಬಣ್ಣಗಳನ್ನು ಗಣೇಶ ಮೂರ್ತಿಗಳಿಗೆ ಉಪಯೋಗಿಸಬೇಕಾಗಿ ಈ ಮೂಲಕ ತಿಳಿಸಿದೆ.

ಪೌರಾಯುಕ್ತರು,
ನಗರಸಭೆ, ಮಂಡ್ಯ.